INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -1, January-February, 2023,
Page No,55 - 61
Peer -Reviewed, Refereed Journal

# ಜನಪದ ಕರಕುಶಲ ಕಲಾವಿದರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು

ವಿಜಯ್ ಆರ್.ಟಿ.[1]

ಭಾರತೀಯ ಸಾಮಾಜಿಕ ವ್ಯವಸ್ಥೆಯು, ವರ್ಣವ್ಯವಸ್ಥೆಯ ತಳಹದಿಯೊಂದಿಗೆ ರಚನೆಯಾಗಿದ್ದು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ಈ ನಾಲ್ಕು ವರ್ಗಗಳಿಂದ ಹೊರಗುಳಿದಿರುವ ಶೋಷಿತ ಸಮುದಾಯಗಳ ವರ್ಗವನ್ನು ಒಳಗೊಂಡ ಒಂದು ವಿಶಾಲವಾದ ಪರಿಕಲ್ಪನೆಯಾಗಿದೆ. ಮಹಾಪ್ರಬಂಧದ ಅಧ್ಯಯನ ವಿಷಯವಾದ ಜನಪದ ಕರಕುಶಲ ಕಲಾವಿದರ ಸಾಮಾಜಿಕಮತ್ತು ಆರ್ಥಿಕ ಸ್ಥಿತಿಗತಿಗಳ ಅಧ್ಯಯನದಲ್ಲಿ ಈ ಜನಪದ ಕರಕುಶಲ ಕಲಾವಿದರು ವರ್ಣ ವ್ಯವಸ್ಥೆಯ ಕೊನೆಯ ವರ್ಗವಾದ ಶೂದ್ರರು ಹಾಗೂ ವರ್ಣ ವ್ಯವಸ್ಥೆಯ ಹೊರಗೆ ಪರಿಗಣಿತವಾಗಿರುವ ಶೋಷಿತ ವರ್ಗಗಳಲ್ಲಿಯೇ ಹೆಚ್ಚಾಗಿರರುವುದು ಸಂಶೋಧನೆಯಲ್ಲಿ ಸ್ಪಷ್ಟವಾಗುತ್ತದೆ. ಈ ಜನಪದ ಕರಕುಶಲ ಕಲಾವಿದರು ಪ್ರಕೃತಿಯೊಂದಿಗೆ ಬೆಸೆದುಕೊಂಡಿರುವ ತಮ್ಮ ಕಲಾ ನೈಪುಣ್ಯತೆಯನ್ನು ತಮ್ಮ ಸಾಮಾಜಿಕ ಸ್ಥಿತಿಯ ಮಿತಿಯೊಳಗೆ ಅಂದರೆ, ತಮ್ಮ ತಮ್ಮ ಜಾತಿಯ ಕಸುಬು ಎಂಬಂತೆ ಪುರಾತನ ಕಾಲದಿಂದಲೂ ಮುಂದುವರೆಸಿಕೊಂಡು ಬಂದಿದ್ದಾರೆ.

ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಸಿಂಧೂ ಬಯಲಿನ ನಾಗಕರಿಕತೆಯೇ ಭಾರತದ ನಾಗರಿಕತೆ ಮತ್ತು ಜನ ಜೀವನದ ಮೂಲ ತಾಣ ಎಂಬುದು ಸಾಕ್ಷೀಕರಣವಾಗುತ್ತದೆ. ಪಶು ಸಂಗೋಪನೆ ಮತ್ತು ವ್ಯವಸಾಯವನ್ನು ಆಶ್ರಯಿಸಿದ್ದ ಭಾರತೀಯರು, ತಾವು ಉತ್ಪಾದಿಸಿದ ವಸ್ತುಗಳನ್ನೇ ತಮ್ಮ ವಿನಿಮಯದ ಮಾನದಂಡವನ್ನಾಗಿಸಿಕೊಂಡಿದ್ದರೆಂದೂ, ಈ ವಸ್ತುವಿನಿಮಯ ಅಥವಾ ಸಾಟಿ ಪದ್ಧತಿಯೇ ಸಿಂಧೂ ಬಯಲಿನ ನಾಗರಿಕತೆಯ ಜನಜೀವನ ಆರ್ಥಿಕ ಸ್ಥಿತಿಯ ತಳಹದಿಯಾಗಿತ್ತು ಎಂಬುದು ಉಲ್ಲೇಖನೀಯ. ಕಾಲಕ್ರಮದಲ್ಲಿ ಲಭ್ಯವಿದ್ದಂತಹ ನೈಸರ್ಗಿಕ ವಸ್ತುಗಳನ್ನು ಉಪಯೋಗಿಸಿ ಕೊಂಡು ಅವಶ್ಯಕ ಉಪಕರಣಗಳನ್ನು ತಯಾರಿಸಿಕೊಳ್ಳುವುದನ್ನು ರೂಢಿಸಿಕೊಳ್ಳಲಾಯಿತು. ಇದರಲ್ಲಿ ಕೃಷಿ ಉಪಕರಣಗಳೇ ಪ್ರಮುಖವಾಗಿದ್ದು, ಕೃಷಿಯಲ್ಲಿ

[1].ಸಂಶೋಧನಾ ವಿದ್ಯಾರ್ಥಿ,ಕರ್ನಾಟಕ ಜಾನಪದ ವಿಶ್ವವಿದ್ಯಾಲಯ,ಗೊಟಗೋಡಿ,ಶಿಗ್ಗಾವಿ ತಾಲ್ಲೂಕು,ಹಾವೇರಿ ಜಿಲ್ಲೆ.

ತೊಡಗಿಸಿಕೊಂಡಿದ್ದವರು ತಾವು ಬೆಳೆದ ಕೃಷಿ ಉತ್ಪನ್ನಗಳಿಗೆ ಬದಲಾಗಿ ಅವಶ್ಯಕ ಕೃಷಿ ಉಪಕರಣಗಳನ್ನು ಪಡೆದುಕೊಳ್ಳುವುದು ರೂಢಿಗೆ ಬಂತು. ಇದು ಕೃಷಿಯಲ್ಲಿ ತೊಡಗಿಸಿ ಕೊಂಡಿರುವ ಜನರ ಸಮುದಾಯ ಮತ್ತು ಕೃಷಿಗೆ ಅಗತ್ಯವಾದ ಉಪಕರಣಗಳನ್ನು ತಯಾರಿಸುವ ಸಮುದಾಯ ಎಂಬುದಾಗಿ ಎರಡು ಪ್ರತ್ಯೇಕ ಸಮುದಾಯಗಳ ಬೆಳವಣಿಗೆಗೆ ಕಾರಣವಾಯಿತು.

**ಜನಪದ ಕರಕುಶಲ ಕಲಾವಿದರ ಸಾಮಾಜಿಕ ಸ್ಥಿತಿಗತಿಗಳು**

'ಜನಪದ' ಎಂಬುದಕ್ಕೆ ಶೈಕ್ಷಣಿಕ ಹಿನ್ನೆಲೆಯ ಅಗತ್ಯವಿಲ್ಲ. ಆರ್ಥಿಕತೆಯ ಆಧಾರದ ಅವಶ್ಯಕತೆಯಿಲ್ಲದೇ ಪ್ರಕೃತಿಯಲ್ಲಿ ಸುಲಭವಾಗಿ ಸಿಗುವ ತಿರಸ್ಕೃತ ವಸ್ತುಗಳನ್ನೇ ಮೂಲ ವಸ್ತುಗಳನ್ನಾಗಿ (ಖಚಿತಿ ಒಚಿಣಜಡುಚಿಟ) ಬಳಸಿಕೊಂಡು, ತಮ್ಮ ಕ್ರಿಯಾತ್ಮಕತೆಯನ್ನು ಭೌತಿಕ ರೂಪದ ಕರಕುಶಲ ವಸ್ತುಗಳನ್ನಾಗಿ ರೂಪಿಸಿದ ಹೆಗ್ಗಳಿಕೆ ಈ ಜನಪದ ಕರಕುಶಲ ಕರ್ಮಿಗಳಿಗಿದೆ. ಈ ಜನರು ಯಾವುದೇ ಹೆಸರುವಾಸಿ, ಹೆಗ್ಗಳಿಕೆ, ಪ್ರಶಸ್ತಿಗಾಗಿ ತಮ್ಮ ಕಲೆಯನ್ನು ಅಪ್ಪಿಕೊಂಡಿಲ್ಲ. ಹಾಗೆಯೇ , ಅಪಾರ ಹಣಸಂಪಾದನೆಯೂ ಈ ಜನರ ಧ್ಯೇಯವಲ್ಲ. ಬದಲಾಗಿ ತಮ್ಮಲ್ಲಿರುವ ಕಲೆಯನ್ನು ಅನಾವರಣಗಳಿಸುವುದೊಂದೇ ಉದ್ದೇಶ. ಪ್ರಜಾ ಸರ್ಕಾರಗಳು ಅಸ್ಥಿತತ್ವವನ್ನು ಪಡೆಯುವ ಮುನ್ನ, ರಾಜ–ಮಹಾರಾಜರು, ಸಾಮಂತರು, ಪಾಳೇಯಗಾರರು, ಶ್ರೀಮಂತ ವರ್ಗದವರು ಇಂತಹ ಕರಕುಶಲ ಕಲೆಗಳನ್ನು ಪ್ರೋತ್ಸಾಹಿಸಿ, ಬೆನ್ನು ತಟ್ಟಿರುವುದಷ್ಟೇ ಎಂಬುದು ಒಂದು ಕಡೆಯಾದರೆ, ಸಾಮಾನ್ಯರ ಮಹಾರಾಜ, ಮಾನವೀಯತೆಯನ್ನು ಮೈದಳೆದು , ಪ್ರಜೆಗಳ ಪ್ರಗತಿಯಲ್ಲಿ ತನ್ನ ಪ್ರಗತಿಯನ್ನು ಗುರುತಿಸಿದ್ದ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಆಸ್ಥಾನ ಕಲಾವಿದರೆಂದು ರಾಜಾಶ್ರಯ ನೀಡಿದ್ದುದು ಬಹಳ ವಿರಳವಾದ ಕಾರ್ಯವಾಗಿತ್ತು. ಅಂತಹ ಉದಾಹರಣೆಯನ್ನು ಬಿಟ್ಟರೆ ಈ ಜನಪದ ಕರಕುಶಲ ಕರ್ಮಿಗಳ ಸಾಮಾಜಿಕ ಸ್ಥಿತಿ ಅವರನ್ನು ಜಾತಿಯ ಮಿತಿಯೊಳಗೆ ಗುರುತಿಸಲ್ಪಟ್ಟಿರುವುದು ಸಾಮಾನ್ಯ ವಿಷಯವಾಗಿದೆ.

ಈ ಜನಪದ ಕರಕುಶಲ ಕಲೆಗಳನ್ನು ಅವುಗಳು ಬೆಳೆದು ಬಂದಂತಹ ಸಾಮಾಜಿಕ ಸ್ಥರದ ಮಿತಿಯೊಳಗೆ ನಶಿಸಿಹೋಗುವಂತಹ ವಾತಾವರಣ ನಿರ್ಮಾಣವಾಗಿರುವುದು ಪ್ರಸ್ತುತ ಸಂಶೋಧನೆಯಲ್ಲಿ ಕಂಡು ಬರುತ್ತದೆ. ಭಾರತ ದೇಶ ಸ್ವತಂತ್ರಗೊಂಡು, ತನ್ನದೇ ಆದ ಸಂವಿಧಾನವನ್ನು ರಚಿಸಿಕೊಂಡು, ಜಾರಿಗೊಳಿಸಿದೆ. ಸಂವಿಧಾನದ ನಾಲ್ಕನೇ ಭಾಗದಲ್ಲಿ ವಿಧಿ 36 ರಿಂದ 51 ರವರೆಗೆ ಸಾಮಾನ್ಯ ಜನರ ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿ ಪ್ರಜಾಸತ್ತಾತ್ಮಕ

ಸಮಾಜವಾದಿ ಪರಿಕಲ್ಪನೆಯನ್ನು ಸಾಕಾರಗೊಳಿಸುವ ಪ್ರಯತ್ನ ಮಾಡುವುದು ಎಲ್ಲಾ ರಾಜ್ಯ ಸರ್ಕಾರಗಳ ಜವಾಬ್ದಾರಿ ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಸಾಮಾನ್ಯರ ಸಾಮಾಜಿಕ ಸ್ಥಿತಿಯನ್ನು ಉತ್ತಮಪಡಿಸಲು, ಭಾರತ ಸಂವಿಧಾನ ಸಭೆ ಅಸ್ಥಿತ್ವಕ್ಕೆ ಬರುವ ಮೊದಲೇ ಕಾಂಗ್ರೆಸ್ 1931ರ ಕರಾಚಿ ಅಧಿವೇಶನದಲ್ಲಿ ಆರ್ಥಿಕ–ಸಾಮಾಜಿಕ ಪ್ರಗತಿಪರ ತತ್ವಗಳಿಗೆ ಒಲವು ತೋರಿಸಿತು. ಸಂವಿಧಾನ ರಚನಾ ಸಭೆಯಲ್ಲಿ ಬಾಬಾ ಸಾಹೇಬ್ ಡಾ.ಬಿಆರ್. ಅಂಬೇಡ್ಕರ್, ಪಂಡಿತ್ ಜವಾಹರಲಾಲ್ ನೆಹರೂ, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಕೆ.ಟಿ. ಷಾ ರವರುಗಳು ರಾಜ್ಯನೀತಿ ನಿರ್ದೇಶಕ ತತ್ವಗಳ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು. (ಡಾ. ಹೆಚ್.ವಿ. ರಾಜಶೇಖರ, 'ಭಾರತ ಸರ್ಕಾರ ಮತ್ತು ರಾಜಕೀಯ' , ಕಿರಣ ಪ್ರಕಾಶನ, ಮೈಸೂರು (2013) PP 113 ಮತ್ತು 114)ಸಾಮಾಜಿಕ ಪ್ರಗತಿ ಎಂದರೆ ಅದು ವಿಶಾಲಾರ್ಥದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ, ತಳಮಟ್ಟದಲ್ಲಿ ಜನಪದರ ಜೀವನದ ಭಾಗವಾಗಿರುವ ಕರಕುಶಲ ಕಲೆಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಒಳಗೊಳ್ಳುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಜನಪದ ಕರಕುಶಲ ಕಲಾವಿದರ ಸಾಮಾಜಿಕ ಸ್ಥಿತಿಯು ಪ್ರತಿಯೊಂದು ಕರಕುಶಲ ಕಲೆಯ ಪಾರಂಪರಿಕ ಹಿನ್ನೆಲೆಯಲ್ಲಿಯೇ ವ್ಯಾಪಿಸಿಕೊಂಡಿರುವುದನ್ನು ರಾಮನಗರ ಜಿಲ್ಲೆಯಲ್ಲಿನ ಕೆಲವು ಜಾನಪದ ಕರಕುಶಲ ಕಲಾವಿದರ ಸಾಮಾಜಿಕ ಸ್ಥಿತಿ–ಗತಿಗಳನ್ನು ವಿಶ್ಲೇಷಣೆ ಮಾಡಲಾಗಿದೆ.

## ಜನಪದ ಕರಕುಶಲ ಕಲಾವಿದರ ಆರ್ಥಿಕ ಸ್ಥಿತಿಗತಿಗಳು

ಸಾಂಪ್ರದಾಯಿಕ ಬೆಳೆಗಳನ್ನು ಬೆಳೆಯುತ್ತಿದ್ದ ಕೃಷಿಕರು, ವಾಣಿಜ್ಯ ಬೆಳೆಗಳನ್ನು ಬೆಳೆಯುವುದನ್ನು ರೂಢಿಸಿಕೊಳ್ಳುತ್ತಿದ್ದಂತೆಯೇ, ಕೇವಲ ಕೃಷಿ ಉಪಕರಣಗಳನ್ನು ತಯಾರಿಸುವಲ್ಲಿ ನಿರತರಾಗಿದ್ದ ಕರಕುಶಲ ಕಲಾವಿದರು ಬೇರೆ ಬೇರೆ ವಸ್ತುಗಳನ್ನು ತಯಾರಿಸಲು ಪ್ರಾರಂಭಿಸಿದರು. ನಂತರದಲ್ಲಿ ಕಬ್ಬಿಣದಂತಹ ಲೋಹಗಳನ್ನು ಬಳಕೆ ಮಾಡುವುದು ಪ್ರಾರಂಭವಾಯಿತು. ಕೃಷಿ ಮತ್ತು ಕುಶಲಕಲೆ ಜೊತೆ ಜೊತೆಗೆ ತಮ್ಮ ಕ್ಷೇತ್ರದ ವ್ಯಾಪ್ತಿಯನ್ನು ವಿಭಿನ್ನವಾಗಿ ವಿಸ್ತಾರಗೊಳಿಸಿಕೊಳ್ಳುತ್ತಾ ಮುಂದುವರೆದವು. ಇದು ಆರ್ಥಿಕತೆಯ ಬೆಳವಣಿಗೆಗೆ ಕಾರಣವಾಯಿತು. ಈ ಆರ್ಥಿಕ ಬೆಳವಣಿಗೆ, ಮನುಷ್ಯ ಯಾವ ಕ್ಷೇತ್ರವನ್ನು ಅನುಪಾಲಿಸಿ ತನ್ನ ಆರ್ಥಿಕ ಸ್ಥಿತಿಗತಿಯನ್ನು ಸರಿಪಡಿಸಿಕೊಳ್ಳಬಹುದು ಎಂದು ಯೋಜನೆ ಮಾಡುವಂತಹ ಹಾಗೂ

ಅದನ್ನು ಅನುಸರಿಸುವಂತಹ ವಾತಾವರಣ ವನ್ನು ನಿರ್ಮಿಸಿತು. ಈ ಪ್ರಕ್ರಿಯೆಯು ಆರ್ಥಿಕ ಕ್ಷೇತ್ರಗಳ ವಿಸ್ತರಣೆಗೆ ನಾಂದಿಹಾಡಿತು.

ಪ್ರಸ್ತುತ ಅಧ್ಯಯನ ವಿಷಯದಲ್ಲಿ ಜನಪದ ಕರಕುಶಲ ಕಲಾವಿದರು ತಾವು ಹಲವಾರು ಕರಕುಶಲ ಕಲೆಗಳಲ್ಲಿ ನಿಪುಣತೆಯನ್ನು ಸಾಧಿಸಿದ್ದಾರೆ. ಈ ನಿಪುಣತೆ ಸಾಧನೆಯಲ್ಲಿ ಯಾವುದೇ ಶೈಕ್ಷಣಿಕ ಅರ್ಹತೆಯಿಲ್ಲ. ಈ ಕಲೆಗಳನ್ನು ಕೆಲವು ಸಂದರ್ಭಗಳಲ್ಲಿ ಹವ್ಯಾಸವನ್ನಾಗಿ ಕಲಿತು ಅಂತಹ ಹವ್ಯಾಸಿ ಕಲಾವಿದರು ಈಗಲೂ ತಮ್ಮ ನೈಪುಣ್ಯತೆಯನ್ನು ಯಾವುದೇ ಆರ್ಥಿಕ ನಿರೀಕ್ಷೆಯಿಲ್ಲದೇ ಸಾಧಿಸುತ್ತಿದ್ದಾರೆ. ಹಾಗೆಯೇ ಕೆಲವು ಕರಕುಶಲಿಗಳು ತಮ್ಮ ಕುಲಕಸುಬು, ಜಾತಿಯ ಕಸುಬು, ಪಾರಂಭಿಕವಾಗಿ ಕಲಿತು ಮುಂದುವರಿಸುತ್ತಾ ಅದರಲ್ಲಿಯೇ ಸಂಪಾಧಿಸಿ, ಗಳಿಸಿದ ಸಂಪಾದನೆಯಿಂದ ಜೀವನ ನಿರ್ವಹಣೆ ಮಾಡುತ್ತಿದ್ದೇನೆ ಎಂದು ಸಂಶೋಧನೆಯ ಸಮಯದಲ್ಲಿ ಹೇಳಿದುದು ಸ್ಪಷ್ಟವಾಗುತ್ತದೆ. ಈ ಕರಕುಶಲ ಕಲೆಯನ್ನು ಗಮನಿಸಿ, ಹೊಸದಾಗಿ ಕಲಿತು, ಅದರಲ್ಲಿ ಆಧುನಿಕ ಯಂತ್ರೋಪಕರಣಗಳನ್ನು ಬಳಸಿಕೊಂಡು ಹೆಚ್ಚು ಹೆಚ್ಚು ಗಳಿಸುವ ಹೊಸ ಕಲಾವಿದರ ಗುಂಪು ಮತ್ತೊಂದು ಕಡೆ ಬೆಳವಣಿಗೆಯಾಗಿರುವುದನ್ನು ಕಾಣಬಹುದಾಗಿದೆ.

ಸಂಶೋಧನಾ ವೇಳೆಯಲ್ಲಿ ಈ ಕರಕುಶಲ ಕಲಾವಿದರ ಆರ್ಥಿಕ ಸ್ಥಿತಿಗತಿಗಳನ್ನು ವಿಶ್ಲೇಷಣೆ ಮಾಡಲು ಮುಂದಾದಾಗ ರಾಮನಗರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಪ್ರಚಲಿತವಿರುವ ಕರಕುಶಲ ಕಲಾವಿದರನ್ನು ಸಂದರ್ಶನ ವಿಧಾನದ ಮೂಲಕ ಮಾತನಾಡಿಸಿ, ಅವರ ಆರ್ಥಿಕ ಸ್ಥಿತಿಗತಿಗಳನ್ನು ವಾಸ್ತವ ನೆಲೆಗಟ್ಟಿನಲ್ಲಿ ಪರಿಶೀಲಿಸಿ, ಪ್ರತಿಯೊಂದು ಕರಕುಶಲ ಕಲೆಯ ಕಲಾವಿದರ ಆರ್ಥಿಕ ಸ್ಥಿತಿಯನ್ನು ಪ್ರಸ್ತುತ ಅಧ್ಯಾಯದಲ್ಲಿ ಈ ಜನಪದ ಕರಕುಶಲ ಕಲಾವಿದರ ಸಾಮಾಜಿಕ ಸ್ಥಿತಿಗತಿಯ ಸ್ಥೂಲ ಪರಿಚಯವನ್ನು ಮಾಡಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಾಯನದಲ್ಲಿನ ಅಧ್ಯಯನವು ಆರ್ಥಿಕ ಸ್ಥಿತಿಗತಿಗಳಿಗೆ ಸೀಮಿತವಾಗಿದೆ.

ಕರಕುಶಲ ಕಲೆಗಳು ಆಧುನಿಕ ಉದ್ಯೋಗ ಕ್ಷೇತ್ರವನ್ನು ಪ್ರವೇಶಿಸುತ್ತಿವೆ. ಜನಪದರ ಜೀವನದೊಂದಿಗೆ ಹಾಸು ಹೊಕ್ಕಾಗಿದ್ದ ಕುಶಲತೆ ದಿನೇ ದಿನೇ ಉದ್ಯಮ ರೂಪವನ್ನು ಪಡೆದುಕೊಳ್ಳುತ್ತಾ ಸಾಗುತ್ತಿದೆ. ಪರಂಪರಾನುಗತ ಕಲೆಗೆ ಚ್ಯುತಿ ಬಾರದಂತೆ ವಿಸ್ತರಿಸಿಕೊಳ್ಳುತ್ತಾ ಕಲೆಯ ಜೀವಂತಿಕೆಯ ಜೊತೆಗೆ ಉದ್ಯೋಗವನ್ನು ಸ್ವಯಂ ಸೃಷ್ಟಿಸಿಕೊಳ್ಳುತ್ತಾ ಹೋಗುತ್ತಿದೆ. ತನ್ಮೂಲಕ ನವ ಕುಶಲ ಕರ್ಮಿಗಳನ್ನು ತನ್ನತ್ತ ಆಕರ್ಷಿಸುತ್ತಿದೆ.

ಸುಶಿಕ್ಷಿತರು ಸರ್ಕಾರದ ಹಾಗೂ ಖಾಸಗಿ ಸಂಸ್ಥೆಗಳು ನೀಡುವ ತರಬೇತಿ ಪಡೆದುಕೊಂಡು ಕುಶಲ ಕಲಾ ವಲಯವನ್ನು ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಿಸುತ್ತಿರುವುದು ಸ್ವಾಗತಾರ್ಹ ವಿಷಯ. ಕರಕುಶಲ ವಸ್ತುಗಳು ನೋಡುಗರನ್ನು ಆಕರ್ಷಿಸುತ್ತವೆ. ಈ ಆಕರ್ಷಣೆಯು ಉದ್ಯೋಗ ಸೃಷ್ಟಿಗೆ ಮೂಲಪ್ರೇರಣೆಯಾಗುತ್ತಿದೆ. ಗ್ರಾಹಕರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿರುವ ಕರಕುಶಲ ಕಲೆಗಳು ಕಲಾವಿದರ ಜೀವನೋಪಾಯಕ್ಕೆ ಭದ್ರವಾದ ಆರ್ಥಿಕ ನೆಲೆಗಟ್ಟನ್ನು ಒದಗಿಸಿಕೊಡುತ್ತಿವೆ.

ಕಣ್ಮರೆಯಾಗುತ್ತಿದ್ದ ಕೆಲ ಕಲೆಗಳೂ ಇತ್ತೀಚೆಗೆ ಬೆಳಕಿಗೆ ಬರುತ್ತಿದ್ದು, ಒಂದು ರೀತಿಯ ಪುನಶ್ಚೇನವೆಂದರೆ ಅತಿಶಯೋಕ್ತಿಯಾಗಲಾರದು. ಕರಕುಶಲಗಳು ಒಂದೆಡೆ ಕಲೆಗಳ ಪುನಶ್ಚೇತನ ಕಾರ್ಯದಲ್ಲಿ ತೊಡಗಿದ್ದರೆ, ಮತ್ತೊಂದೆಡೆ ಸರ್ಕಾರದ ಸೂಕ್ತ ರೀತಿಯ ಉತ್ಸಾಹ ತೋರದೆ, ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ. ಉದ್ಯೋಗ ಸೃಷ್ಟಿಯ ಕೂಗು ಇನ್ನಿತರ ಕ್ಷೇತ್ರಗಳಲ್ಲಿ ಉಂಟಾಗುತ್ತಿರುವಂತೆ ಕಲಾವಲಯಕ್ಕೂ ವಿಸ್ತರಿಸಿ ಕೊಳ್ಳಬೇಕು. ಹಾಗಾದಾಗ ಮಾತ್ರವೇ ಜನಪದ ಕರಕುಶಲ ಕಲೆ ಮತ್ತು ಕಲಾವಿದರು ಉಳಿಯಲು ಸಾಧ್ಯ.

ನಗರ ಪ್ರದೇಶಗಳಿಗಿಂತಲೂ ಗ್ರಾಮೀಣ ಪ್ರದೇಶಗಳಲ್ಲಿ ಕರಕುಶಲಿಗಳು ತುಸು ಹೆಚ್ಚಾಗಿಯೇ ಇದ್ದಾರೆ. ಗ್ರಾಮೀಣ ಭಾಗಗಳಲ್ಲಿ ಸ್ವ ಉದ್ಯೋಗ ಸೃಷ್ಟಿಸಿಕೊಡುವ ನೈತಿಕ ಜವಾಬ್ದಾರಿ ಸರ್ಕಾರದ ಮೇಲಿದೆ. ಸ್ವ–ಉದ್ಯೋಗ ಮಾಡಲು ಹೆಚ್ಚಿನ ಅವಕಾಶವು ನಗರಭಾಗಕ್ಕಿಂತ ಗ್ರಾಮೀಣ ಭಾಗದಲ್ಲಿ ಹೆಚ್ಚಿದೆ. ಗ್ರಾಮೀಣ ಕರಕುಶಲಕರ್ಮಿಗಳು ಅಸಂಘಟಿತರಾಗಿರುವುದರಿಂದ ಅಥವಾ ಸರ್ಕಾರದ ಸೌಲಭ್ಯಗಳ ಬಗೆಗೆ ಹೆಚ್ಚಿನ ಮಾಹಿತಿ ಇಲ್ಲದಿರುವುದರಿಂದ ವೃತ್ತಿ ಕೌಶಲ್ಯತೆ ಸದ್ಬಳಕೆ ಆಗುತ್ತಿಲ್ಲ. ಗ್ರಾಮೀಣ ಸಾಲದ ಸಾಂಸ್ಥಿಕ ಮೂಲಗಳು ನಿರೀಕ್ಷಿತ ಗುರಿ ಮುಟ್ಟುತ್ತಿಲ್ಲ. ಈ ಕಾರಣಗಳಿಂದಾಗಿ ಕರಕುಶಲಿ ಯುವಜನಾಂಗ ನಗರಗಳತ್ತ ಆಕರ್ಷಿತರಾಗಿ ಕೈಗಾರಿಕೆ, ನಿರ್ಮಾಣ, ಕೆಲಸ, ಸೇವಾ ಕ್ಷೇತ್ರ ಹಾಗೂ ಇತರೆ ವಲಯಗಳಲ್ಲಿ ದೊರೆಯುವ ಪರ್ಯಾಯ ಉದ್ಯೋಗಗಳನ್ನು ಅವಲಂಬಿಸಲು ನಗರ ಪ್ರದೇಶಗಳತ್ತ ವಲಸೆ ಹೋಗುತ್ತಿದ್ದಾರೆ. ಕಿರು ಹಣಕಾಸು ಸಂಸ್ಥೆಗಳು ನೀಡುವ ಸಣ್ಣ ಪ್ರಮಾಣದ ಚಿಕ್ಕ ಮೊಬಲಗಿನ ಸಾಲವನ್ನು ಸ್ವಸಹಾಯ ಸಂಘಗಳು ಹಾಗೂ ಸ್ತ್ರೀ ಶಕ್ತಿ ಸಂಘಗಳು ಮದುವೆ, ಮುಂಜಿ, ಕೈ ಸಾಲ ಇತ್ಯಾದಿ ಕಾರ್ಯಗಳಿಗೆ ವಿನಿಯೋಗಿಸುತ್ತಿದ್ದು, ಸಾಲ ಪಡೆದುಕೊಳ್ಳುವ ಮೂಲ ಉದ್ದೇಶವೆ ಮಣ್ಣು ಪಾಲಾಗುತ್ತಿದೆ.

**ಉಪಸಂಹಾರ :**

ಸಾಮಾಜಿಕವಾಗಿ ಹಿಂದುಳಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ಭಾರತದಲ್ಲಿ ಕಂಡುಬರುವ ಒಂದು ಗಂಭೀರ ಸಮಸ್ಯೆಯೆಂದರೆ ಬಡತನ. 2011ರ ಅಂಕಿ–ಅಂಶಗಳ ಪ್ರಕಾರ ಪ್ರಪಂಚದ 1/5 ರಷ್ಟು ಬಡಜನರು ಭಾರತದಲ್ಲಿ ಇದ್ದಾರೆ. ಇದಕ್ಕೆ ತ್ವರಿತಗತಿಯಲ್ಲಿ ಏರುತ್ತಿರುವ ಜನಸಂಖ್ಯೆ, ಬೆಲೆಯೇರಿಕೆ, ನಿರುದ್ಯೋಗ, ಭೂ ಹಿಡುವಳಿ ರಹಿತರು, ನೈಸರ್ಗಿಕ ಸಂಪನ್ಮೂಲಗಳ ಅಸಮರ್ಪಕ ಬಳಕೆ, ಮೂಲಭೂತ ಸೌಲಭ್ಯಗಳ ಕೊರತೆಯ ಜೊತೆಗೆ ಸಾಮಾಜಿಕ ಅಸಮಾನತೆಯು ಬಹುಮುಖ್ಯ ಕಾರಣವಾಗಿದೆ.


ನಮ್ಮ ನಾಡಿನ ಸಂಸ್ಕೃತಿ ನಡವಳಿಕೆಯ ಸಂಕೀರ್ಣತೆಯನ್ನು ಬಹುಸೂಕ್ಷ್ಮವಾಗಿ ಕಟ್ಟಿಕೊಡುವಲ್ಲಿ ಜನಪದ ಕುಶಲಕಲೆಗಳ ಪಾತ್ರ ಹಿರಿದಾದುದು. ಕರಕುಶಲ ಕಲಾವಿದರ ಸಾಮಾಜಿಕ ಸ್ಥಾನಮಾನಗಳ್ನು ಅಭ್ಯಾಸಿಸುವ ಸಮಾಜಶಾಸ್ತ್ರಜ್ಞನಾಗಲಿ ಸಮುದಾಯ ತನ್ನಲ್ಲಿ ಮೇಳೈಸಿಕೊಂಡಿರುವ ಒಳಪದರವಾದ ಕರಕುಶಲ ಕಲೆಗಳ ಅಭ್ಯಾಸ ಮಾಡದಿದ್ದರೆ ಸತ್ಯಶೋಧನೆಯಾಗಲು ಬಹುಮುಖಗಳ ಪರಿಚಯವಾಗದು. ಹರ್ಸ್ ಕೋವಿಟ್ಸ್ ನ ಮಾತಿನಂತೆ ಕುಶಲ ಕಲೆಗಳು "ಜನತೆಯ ನೈಜ ಸಂಸ್ಕೃತಿಯ ತೆರೆಗಂಧಗಳಷ್ಟೆ ಅಲ್ಲ, ನಿರ್ಧಿಷ್ಟ ಜೀವನ ಕ್ರಮದ ಸೂಕ್ಷ್ಮ ಚಿತ್ರಗಳನ್ನು ಕೊಡುತ್ತದೆ.

ಒಂದು ದೇಶದ ಅಭಿವೃದ್ಧಿ ವಿವೇಕಯುತವಾದ, ದೂರದೃಷ್ಟಿಯುಳ್ಳ ಚತುರ ಹಾಗೂ ಕ್ರಿಯಾಶೀಲ ಮಾನವ ಸಂಪನ್ಮೂಲವನ್ನು ಅವಲಂಬಿಸಿರುತ್ತದೆ, ಆದುದರಿಂದ ಗ್ರಾಮೀಣ ಜನರಿಗೆ ಉತ್ತಮ ತರಬೇತಿ ನೀಡುವ ಮೂಲಕ ಕೌಶಲ್ಯಾಭಿವೃದ್ಧಿ ಹೆಚ್ಚಿಸುವುದರ ಮೂಲಕ ಗ್ರಾಮೀಣ ಆರ್ಥಿಕತೆ ಹೆಚ್ಚು ಪರಿಣಾಮಕಾರಿ ಹಾಗೂ ಗುಣಾತ್ಮಕವಾಗಿ ಪರಿವರ್ತನೆಯಾಗುತ್ತದೆ. ಇಲ್ಲವೆ ಹೀಗಿರುವ ಕರಕುಶಲ ಕಲಾವಿದರಿಗೆ ಸಾಲಸೌಲಭ್ಯ ಮಾರುಕಟ್ಟೆ ವ್ಯವಸ್ಥೆ ಇತ್ಯಾದಿಗಳನ್ನು ವಿಶೇಷವಾಗಿ ಗೊತ್ತುಪಡಿಸಿದ ಕಾರ್ಯಕ್ರಮದ ಅಡಿಯಲ್ಲಿ ಅನುಷ್ಠಾನಗೊಳಿಸಿದಾಗ ಆರ್ಥಿಕತೆಯ ಸರಾಗ ಕಾರ್ಯನಿರ್ವಹಣೆ ಮತ್ತು ಆರ್ಥಿಕ ಪ್ರಗತಿ ಸಾಧ್ಯವಾಗುತ್ತದೆ.

**ಛಾಯಾಚಿತ್ರಗಳು**







**ಪರಾಮರ್ಶನಾ ಗ್ರಂಥಗಳು**

1. **ಬೆನಕನಹಳ್ಳಿ ಜಿ.ನಾಯಕ್,** ಕರ್ನಾಟಕದ ಕಲೆಗಳು ಸಂಪುಟ–3, ಕರಕುಶಲ ಕಲೆಗಳು (1986) ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018.
2. **ಪ್ರೊ. ಎ.ವಿ.ನಾವಡ** (ಸಂ) ಕರ್ನಾಟಕ ಸಂಶೋಧನಾ ಜಾನಪದ (2014) ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ರಾಜಾ ಪ್ರಿಂಟರ್ಸ್, ನಂ. 59, 4ನೇ ಕ್ರಾಸ್, ಲಾಲ್‌ಬಾಗ್ ರಸ್ತೆ, ಬೆಂಗಳೂರು–560027.
3. **ಡಾ. ಹೆಚ್.ಆರ್. ಕೃಷ್ಣಯ್ಯಗೌಡ ,** (ಲೇ) ಕರ್ನಾಟಕ ಆರ್ಥಿಕತೆ (2014) ವಿದ್ಯಾನಿಧಿ ಪ್ರಕಾಶನ, ಸ್ಟೇಷನ್ ರೋಡ್, ಮಹೇಂದ್ರಕರ ಸರ್ಕಲ್ ಹತ್ತಿರ, ಗದಗ–582101.
4. **ಡಾ. ಹೆಚ್.ಆರ್. ಕೃಷ್ಣಯ್ಯಗೌಡ ,** (ಲೇ) ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ. (2015), ಸ್ಪಂದನ ಪ್ರಕಾಶನ, ನಂ. 156, 12ನೇ ಕ್ರಾಸ್, ಲಲಿತಮಹಲ್ ನಗರ, ಮೈಸೂರು–570011.
5. **ಡಾ. ಹೆಚ್.ವಿ. ರಾಜಶೇಖರ,** 'ಭಾರತ ಸರ್ಕಾರ ಮತ್ತು ರಾಜಕೀಯ' , ಕಿರಣ ಪ್ರಕಾಶನ, ಮೈಸೂರು (2013) PP 113 ಮತ್ತು 114.